Com-OS No.3/2021
PW.1

(ಸಾಕ್ಷಿಯನ್ನು ಈ ದಿನ ದಿನಾಂಕ 11.08.2022 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಗಿದೆ)

**<u>ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಎ.ಕೆ. ವಕೀಲರಿಂದ</u>**

1. ನಾನು ವಹಿಸಿಕೊಂಡು ಕಾಮಗಾರಿ ಕೆಲಸ 04.10.1993 ರಂದು ಮುಗಿದಿರುತ್ತದೆ ಅಂದರೆ ಸರಿ. ನಂತರ ಎಪ್ರಿಲ್-1996 ರಲ್ಲಿ ನಾನು ಪ್ರತಿವಾದಿಗಳಿಗೆ ಕ್ಲಾಸ 66 ರ ಪ್ರಕಾರ ನನ್ನ ಕ್ಲೇಮ ಹಣ ಪಾವತಿ ಮಾಡುವಂತೆ ಕೋರಿ ನೋಟಿಸ ನೀಡಿರುತ್ತೇನೆ. ಸದರಿ ನೋಟಿಸನ್ನು ಪ್ರತಿವಾದಿಗಳಿಗೆ ಸ್ವತಃ ಮತ್ತು ಅಂಚೆ ಮೂಲಕ ನಾನು ಕಳುಹಿಸಿರುತ್ತೇನೆ. ಆ ರೀತಿ ಕೊಟ್ಟಿರುವ ನೋಟಿಸ ಮತ್ತು ಅದನ್ನು ಪ್ರತಿವಾದಿಗಳಿಗೆ ಅಂಚೆ ಮೂಲಕ ಕಳುಹಿಸಿರುವ ಬಗ್ಗೆ ರಸೀದಿ ಹಾಗೂ ಸದರಿ ನೋಟಿಸ ಪ್ರತಿವಾದಿಗಳಿಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ಸದರಿ ನೋಟಿಸನ ಮೇರೆಗೆ 2ನೇ ಪ್ರತಿವಾದಿಯು ಕ್ಲೇಮ ಪಾವತಿ ಮಾಡುವಂತೆ ಸರಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಈ ಮೇಲೆ ಹೇಳಿದಂತೆ ನಾನು ಕಳುಹಿಸಿರುವ ನೋಟಿಸಗೆ 2ನೇ ಪ್ರತಿವಾದಿಯು ಲಿಖಿತ ಉತ್ತರ ನೀಡಿರುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಆದರೆ ಸದರಿ ನನ್ನ ಕ್ಲೇಮ ಈತನಕ ಇತ್ಯರ್ಥ ಆಗಿಲ್ಲ. ನನ್ನ ಕ್ಲೇಮ ಕರಾರು ಪ್ರಕಾರ ಇತ್ಯರ್ಥ ಮಾಡಲು ಆಗುವುದಿಲ್ಲವೆಂದು ಆಗಿರುತ್ತದೆ ಅಂದರೆ ಸರಿಯಲ್ಲ. ಆದರೆ ಕ್ಲಾಸ 52 ರ ಪ್ರಕಾರ ಇತ್ಯರ್ಥ ಆಗುವುದಿಲ್ಲವೆಂದು ಸರಕಾರದಿಂದ ತೀರ್ಮಾನ ಆಗಿರುತ್ತದೆ.

2. ನಾನು ಈ ಮೇಲೆ ಹೇಳಿರುವಂತೆ ಹಣ ಕ್ಲೇಮ ಮಾಡುವ ಪೂರ್ವದಲ್ಲಿ ಕ್ಲಾಸ 52 ರ ಪ್ರಕಾರ ಪ್ರತಿವಾದಿಗಳು ನನಗೆ ಬರಬೇಕಾದ ಹಣವನ್ನು ಪಾವತಿ

ಮಾಡಿದ್ದರು ಅಂದರೆ ಸರಿಯಲ್ಲ. ಆ ರೀತಿ ಪ್ರತಿವಾದಿಗಳು ನನಗೆ ಹಣ ಪಾವತಿ ಮಾಡಿದ್ದರೂ ಸಹ ನಾನು ಕ್ಲಾಸ 66 ರ ಪ್ರಕಾರ ಆರ್ಬಿಟೇಟರನ್ನು ನೇಮಕ ಮಾಡುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಿಎಂಪಿ 1/2000 ರಂತೆ ಅರ್ಜಿ ಸಲ್ಲಿಸಿದ್ದೆ ಅಂದರೆ ಸರಿ. ಸದರಿ ಅರ್ಜಿ ದಿನಾಂಕ 07.04.2000 ರಂದು ವಜಾ ಆಗಿರುತ್ತದೆ ಅಂದರೆ ಸರಿ. ಸದರಿ ಅರ್ಜಿ ವಜಾ ಆಗಿರುವ ಆದೇಶದ ವಿರುದ್ಧ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂಬರ 33486/2000 ರಂತೆ ರಿಟ್ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿ. ಸದರಿ ರಿಟ್ ಅರ್ಜಿ ಆದೇಶದಂತೆ ದಿನಾಂಕ 08.04.2002 ರಂತೆ ಸರಕಾರದ ನಿವೃತ್ತ ಕಾರ್ಯದರ್ಶಿಯಾಗಿರುವ ಶ್ರೀ ಎಸ್.ಕೆ. ಧ್ರುವ ಅವರನ್ನು ಅರ್ಬಿಟೇಟರ ಆಗಿ ನೇಮಕ ಮಾಡಿದೆ ಅಂದರೆ ಸರಿ. ಸದರಿ ಅರ್ಬಿಟೇಟರವರು ಕ್ಲಾಸ 66 ಅರ್ಬಿಟರಲ್ ಪ್ರಕ್ರಿಯೆಗೆ ಅನ್ವಯವಾಗುವುದಿಲ್ಲ ಎಂದು ಹೇಳಿ ಅರ್ಜಿಯನ್ನು ದಿನಾಂಕ 28.05.2003 ರಂದು ವಜಾಗೊಳಿಸಿರುತ್ತಾರೆ ಅಂದರೆ ಸರಿ. ಸದರಿ ಅರ್ಬಿಟರಲ್ ಅವಾರ್ಡ ವಿರುದ್ದ ಗುಲಬರ್ಗಾ ಜಿಲ್ಲಾ ನ್ಯಾಯಾಲಯದಲ್ಲಿ ಎಸಿ 6/2004 ರಂತೆ ಅರ್ಜಿ ಸಲ್ಲಿಸಿದ್ದೆ ಅಂದರೆ ಸರಿ. ಸದರಿ ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ಪುರಸ್ಕರಿಸಿ ನಾನು ಸಲ್ಲಿಸಿರುವ ಅರ್ಬಿಟರಲ್ ಅರ್ಜಿಯನ್ನು ಮರು ಪರಿಶೀಲನೆಗೆ ಕಳುಹಿಸಿರುತ್ತಾರೆ ಅಂದರೆ ಸರಿ. ಸದರಿ ಜಿಲ್ಲಾ ನ್ಯಾಯಾಲಯವು ಮಾಡಿರುವ ಆದೇಶದ ವಿರುದ್ಧ ಪ್ರತಿವಾದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ ನಂಬರ 9531/2006 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಅಂದರೆ ಸರಿ. ಸದರಿ ಮೇಲ್ಮವಿ ವಿಚಾರಣೆಗೆ ಬಾಕಿ ಇರುವ ಸಂದರ್ಭದಲ್ಲಿ ಈ ಮೇಲೆ ಹೇಳಿರುವ ಅರ್ಬಿಟೇರ ಧ್ರುವ ರವರು ತೀರಿಕೊಂಡ ಕಾರಣ ಬೇರೆ ಅರ್ಬಿಟೇರನ್ನು ನೇಮಕ

ಮಾಡುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಿಎಂಪಿ ನಂಬರ 24/2007 ರಂತೆ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿ. ಸದರಿ ಅರ್ಜಿ ಮೇರೆಗೆ ಮಾನ್ಯ ಉಚ್ಚ ನ್ಯಾಯಾಲಯವು ನ್ಯಾಯಮೂರ್ತಿ ಶ್ರೀ ಜಯಸಿಂಹ ಬಾಬು ಅವರನ್ನು ಅರ್ಬಿಟೇಟರ ಆಗಿ ನೇಮಕ ಮಾಡಿರುತ್ತದೆ ಅಂದರೆ ಸರಿ. ಈ ಸಮಯದಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಮೇಲ್ಮನವಿ ಎಂ.ಎಫ್.ಎ. ನಂಬರ 9531/2006 ದಿನಾಂಕ 17.10.2008 ರಂದು ಪುರಸ್ಕಾರಗೊಂಡು ಈ ಮೇಲೆ ಹೇಳಿರುವ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಬಿಟರೇಶನ ಕೇಸನ್ನು ಮರು ವಿಚಾರಣೆ ಮಾಡಬೇಕೆಂದು ಆದೇಶವಾಗಿರುತ್ತದೆ ಅಂದರೆ ಸರಿ. ಸದರಿ ಆದೇಶದಂತೆ ಗುಲಬರ್ಗಾ ಜಿಲ್ಲಾ ನ್ಯಾಯಾಲಯವು ನಾನು ಸಲ್ಲಿಸಿದ್ದ ಅರ್ಜಿಯನ್ನು ಮರುವಿಚಾರಣೆ ಮಾಡಿ ಅರ್ಜಿಯನ್ನು ವಜಾಗೊಳಿಸಿ ಶ್ರೀ ಧ್ರುವ ಅವರು ಮಾಡಿರುವ ಅರ್ಬಿಟರಲ್ ಅವಾರ್ಡನ್ನು ಎತ್ತಿ ಹಿಡಿದಿರುತ್ತದೆ ಅಂದರೆ ಸರಿ. ಸದರಿ ಜಿಲ್ಲಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಿ.ಆರ್.ಪಿ ನಂಬರ 2001/2011 ರಂತೆ ರಿವಿಜನ್ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿ. ಸದರಿ ರಿವಿಜನ್ ಅರ್ಜಿಯನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 12.09.2011 ರಂದು ವಜಾ ಮಾಡಿರುತ್ತದೆ ಅಂದರೆ ಸರಿ. ಸದರಿ ಆದೇಶವನ್ನು ಪ್ರಶ್ನಿಸಿ ನಾನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ನಂಬರ 13528/2012 ರಂತೆ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿ. ಸದರಿ ಎಸ್.ಎಲ್.ಪಿ. ಅರ್ಜಿ ದಿನಾಂಕ 06.12.2013 ರಂದು ವಜಾ ಆಗಿರುತ್ತದೆ ಅಂದರೆ ಸರಿ. ಸದರಿ ಅರ್ಜಿ ವಜಾ ಆದ 7 ವರ್ಷಗಳ ನಂತರ ನಾನು ನನ್ನ ಕ್ಲೇಮನ ಬಗ್ಗೆ ಮಧ್ಯಸ್ಥಿಗಾರರನ್ನು ನೇಮಿಸುವಂತೆ Commercial Courts Act Sec.12 ರ ಪ್ರಕಾರ ಅರ್ಜಿ ಸಲ್ಲಿಸಿದ್ದೆ

ಅಂದರೆ ಸರಿ. ಆದರೆ ಈ ಸಮಯದ ಮಧ್ಯೆ ನನ್ನ ಕ್ಲೇಮ ಸೆಟ್ಲ ಮಾಡುವಂತೆ ಕೋರಿ ನಾನು ಸರಕಾರದ ಜೊತೆ ಪತ್ರ ವ್ಯವಹಾರ ಮಾಡಿರುತ್ತೇನೆ.

(ಈ ಸಮಯದಲ್ಲಿ ನ್ಯಾಯಾಲಯದ ಸಮಯವಾದ್ದರಿಂದ ಪ್ರತಿವಾದಿಗಳ ಕೋರಿಕೆಯ ಮೇರೆಗೆ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಗಿದೆ. )

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸರಿ ಇದೆ.

(ಟಿ.ಎನ್.ಇನವಳ್ಳಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು..
ರಾಯಚೂರು.